**ಅಸಲು ದಾವಾ ನಂಃ 70/2015**
**ಪಿ.ಡಬ್ಲ್ಯೂಃ 1,**

**<u>ದಿನಾಂಕ :11-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲು :- ಶ್ರೀ. ಎಸ್. ಎ. ಕೆ. ಪ್ರತಿವಾದಿ ಪರ ವಕೀಲರಿಂದ :</u>**

ನಿಪಿ-1 ರಿಂದ 16 ದಾಖಲೆಗಳು ನನ್ನ ಗಂಡ ಅಪಘಾತಕ್ಕೆ ಒಳಗಾದ ದಾಖಲೆಗಳು ಎಂದರೆ ಸರಿ. ನನ್ನ ಗಂಡನಗಿಎ 2013 ರಲ್ಲಿ ಅಪಘಾತ ಆಗಿದ್ದು ಈ ದಾವೆ ಹಾಕುವಾಗ ನನ್ನ ಗಂಡ ಅಪಘಾತದ ಖರ್ಚು ವೆಚ್ಚು ದಾವೆಯಲ್ಲಿ ತಿಳಿಸಿಲ್ಲಾ. ನಿಪಿ-17 ಮತ್ತು 18 ಪ್ರಕಾರ ನನ್ನ ಗಂಡನಿಗೆ ಅಪಘಾತದಲ್ಲಿ ಇಷ್ಟು ಪರಿಹಾರ ಬಂದಿದೆ ಎಂದು ದಾವೆಯಲ್ಲಿ ತಿಳಿಸಿಲ್ಲಾ. ಓ ಎಸ್ ನಂ: 227/2007 ರ ನಿಪಿ-19 ರಿಂದ 22 ಪ್ರಕಾರ 5ನೇ ಪ್ರತಿವಾದಿ, ಪ್ರತಿವಾದಿ ನಂ-1 ರಿಂದ 4 ವಿರುದ್ದ ರಾಯಚೂರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲಾ. 5ನೇ ಪ್ರತಿವಾದಿ ಸಲ್ಲಿಸಿದ ದಾವೆಲ್ಲಿ ನಿಪಿ-19 ರಿಂದ 22 ಪ್ರಕಾರ 1/5 ಅಂಶ ಪಾಲು ಕೊಡಬೇಕು ಎಂದು ಆದ ತೀರ್ಪಿನ ಬಗ್ಗೆ ನನಗೆ ಗೊತ್ತಿಲ್ಲಾ. 5ನೇ ಪ್ರತಿವಾದಿ ಸಲ್ಲಿಸಿದ ದಾವೆಯ ತೀರ್ಪು ವಿರುದ್ದ ಪ್ರತಿವಾದಿಯರು ಆರ್.ಎ. 11/2010 ರಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರ ಮುಂದೆ ಅಪೀಲ ಸಲ್ಲಿಸಿದ ಬಗ್ಗೆ ಗೊತ್ತಿಲ್ಲಾ. ಸದರಿ ಆರ್.ಎ. 11/2010 ರಲ್ಲಿ ರಾಜಿಯಾಗಿ ಡಿಕ್ರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲಾ. ಸದರಿ ರಾಜಿ ಡಿಕ್ರಿ ಪ್ರಕಾರ ಪ್ರತಿವಾದಿ ನಂ-1ರಿಂದ 4 ರವರು ಅವರ ವರ ಹಿಸ್ಸೆ ಪ್ರಕಾರ ಸ್ವಾಧೀನ ಅನುಭವ ಹೊಂದಿದ್ದಾರೆ ಎಂದರೆ ಗೊತ್ತಿಲ್ಲಾ. ಆರ್.ಎ. ನಂ: 11/2010 ರಲ್ಲಿ ಆದ ರಾಜಿ ಡಿಕ್ರಿಯನ್ನು ನಾನು ಪ್ರಶ್ನೆ ಮಾಡಿಲ್ಲಾ. ನಿಪಿ-23 ಖರಿದಿ ಪತ್ರ ಯಾರು ಯಾರಿಂದ ಖರಿದಿಸಿದ್ದಾರೆಂದು ಮತ್ತು ಯಾವ ಆಸ್ತಿಗೆ ಸಂಬಂಧಿಸಿದೆ ಅಂತಾ ನಾನು ಹೇಳಿಲ್ಲಾ ಮತ್ತು ತಿಳಿಸಿಲ್ಲಾ. ಅದೇ ರೀತಿ ನಿಪಿ-24 ರ ಪ್ರಕಾರ , ಮಲ್ಲಿಕಾರ್ಜುನ ಮತ್ತು ಶ್ಯಾಮರಾವ ನಡುವೆ ಆದ ಖರಿದಿ ಪತ್ರ ಎಷ್ಟು ಮೊತ್ತಕ್ಕೆ ಮತ್ತು ಯಾವ ಆಸ್ತಿ ಎಂದು ಗೊತ್ತಿಲ್ಲಾ. ಅದೇ ರೀತಿ ನಿಪಿ-25 ರ ಖರಿದಿ ಪತ್ರ , ಯಾವ ಆಸ್ತಿಗೆ, ಯಾರ ನಡುವೆ ಆದ ಖರಿದಿ ಪತ್ರ ಎಷ್ಟು

**ಅಸಲು ದಾವಾ ನಂಃ 70/2015**
**ಪಿ.ಡಬ್ಲ್ಯೂಃ 1,**

ಮೊತ್ತಕ್ಕೆ ಮತ್ತು ಯಾವ ಆಸ್ತಿ ಎಂದು ಗೊತ್ತಿಲ್ಲಾ. ಅದೇ ರೀತಿ ನಿಪಿ-26 ರ ಖರಿದಿ ಪತ್ರ , ಯಾವ ಆಸ್ತಿಗೆ, ಯಾರ ನಡುವೆ ಆದ ಖರಿದಿ ಪತ್ರ ಎಷ್ಟು ಮೊತ್ತಕ್ಕೆ ಮತ್ತು ಯಾವ ಆಸ್ತಿ ಎಂದು ಗೊತ್ತಿಲ್ಲಾ. ಅದೇ ರೀತಿ ನಿಪಿ-27 , ಮಲ್ಲಣಗೌಡ ಮತ್ತು ಡಿ.ಬಸವರಾಜ ನಡುವೆ ಆದ ಖರಿದಿ ಕರಾರು ಪತ್ರ ಅದು ಮಾರ್ಟಗೇಜ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ-27 ಸದರಿ ಕರಾರು ಪತ್ರ, ಖರಿದಿ ಆಗಿದೆಯೋ ಅಥವಾ ರದ್ದಾಗಿದೆ ಎಂದು ಗೊತ್ತಿಲ್ಲಾ. ನಿಪಿ-27 ಕರಾರು ಪತ್ರ ಎಷ್ಟು ಮೊತ್ತಕ್ಕೆ ಖರಿದಿ ಆಗಿದೆ ಮತ್ತು ಮುಂಗಡ ಹಣ ಎಷ್ಟು ಅಂತಾ ಗೊತ್ತಿಲ್ಲಾ. ನಿಪಿ-28 ಅಂತಯ್ಯಾ ಮತ್ತು ಬಸವರಾಜ ನಡುವೆ ಆದ ಖರಿದಿ ಕರಾರು ಪತ್ರ ಖರಿದಿ ಆಗಿದೆಯೋ ಅಥವಾ ರದ್ದಾಗಿದೆ ಗೊತ್ತಿಲ್ಲಾ, ಅದು ಮಾರ್ಟಗೇಜ ಎಂದು ನುಡಿಯತ್ತಾರೆ ಮತ್ತು ಯಾವ ಆಸ್ತಿ ಎಂದು ಗೊತ್ತಿಲ್ಲಾ. ನಿಪಿ-28 ಕ್ಕೆ ಎಷ್ಟು ಮೊತ್ತಕ್ಕೆ ಕರಾರು ಪತ್ರ ಆಗಿದೆ ಮತ್ತು ಮುಂಗಡ ಹಣ ಎಷ್ಟು ಅಂತಾ ಗೊತ್ತಿಲ್ಲಾ.

**( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹೆಚ್ಚಿನ ಪಾಟಿ ಸವಾಲಿಗಾಗಿ, ಸಮಯ ಕೋರಿದ್ದು, ಪಾಟಿ ಸವಾಲು ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**